ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕೋರ್ಟ್ ಸುದ್ದಿ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ದಿನಾಂಕ : DATE : 10/05/2019

# ಮೀಸಲು ಬಡ್ತಿ ಇಂದು ನಿರ್ಧಾರ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದ ಸರ್ಕಾರಿ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ನೌಕರರಿಗೆ ನೀಡಲಾಗಿದ್ದ ಮೀಸಲು ಬಡ್ತಿ ರಕ್ಷಿಸುವ ಉದ್ದೇಶದಿಂದ ಜಾರಿಗೆ ತಂದ ಕಾನೂನಿನ ಭವಿಷ್ಯ ಶುಕ್ರವಾರ ನಿರ್ಧಾರವಾಗಲಿದೆ. ಸುಪ್ರಿಂಕೋರ್ಟ್ ದ್ವಿಸದಸ್ಯ ಪೀಠ ಈ ಪ್ರಕರಣದಲ್ಲಿ ವಿಚಾರಣೆ ಪೂರ್ಣಗೊಳಿಸಿದ್ದು, ಕಾನೂನು ಜಾರಿ ಮಾಡಬಹುದೇ? ಬೇಡವೇ? ಅಥವಾ ಪ್ರಕರಣದಲ್ಲಿ ಇನ್ನಷ್ಟು ಪರಾಮರ್ಶೆ ಆಗಲು ಸಂವಿಧಾನಕ್ಕೆ ಪೀಠಕ್ಕೆ ವರ್ಗಾಯಿಸುವುದು ಸೂಕ್ತವೇ ಎಂಬ ನಿರ್ಧಾರ ಪ್ರಕಟಿಸಲಿದೆ. 2017ರ ಫೆಬ್ರವರಿಯಲ್ಲಿ ಸುಪ್ರಿಂಕೋರ್ಟ್ ಮೀಸಲು ಬಡ್ತಿ ರದ್ದುಪಡಿಸಿ ಹೊಸದಾಗಿ ಜ್ಯೇಷ್ಠತಾಪಟ್ಟಿ ಮಾಡುವಂತೆ ಸೂಚಿಸಿತ್ತಲ್ಲದೆ ಮೀಸಲು ಮುಂಬಡ್ತಿ ಪಡೆದವರನ್ನು ತಕ್ಷಣವೇ ಹಿಂಬಡ್ತಿಗೊಳಿಸುವಂತೆ ನಿರ್ದೇಶನ ನೀಡಿತ್ತು. ಆದರೆ, ಸರ್ಕಾರ ಸುಪ್ರಿಂಕೋರ್ಟ್ ಆದೇಶ ಪಾಲನೆಗೆ ಐದು ಬಾರಿ ಸಮಯಾವಕಾಶ ಕೋರಿ ಬಳಿಕ, ಮೀಸಲು ಬಡ್ತಿ ಸಂರಕ್ಷಿಸುವ ಕಾಯ್ದೆ ರೂಪಿಸಿತ್ತು. ಇದರ ವಿರುದ್ಧ ಸುಪ್ರೀಂ ಮೊರೆ ಹೋಗಲಾಗಿತ್ತು.